



ಬಿಳಿ ಸುಂದರಿಯರು (ದೊಡ್ಡ ಬೆಳ್ಳಕ್ಕಿ)

ಇಲ್ಲಿನ ದ್ವೀಪಗಳಿಗೆ ಅನ್ವರ್ಥನಾಮ ಇಡಲಾಗಿದೆ. ಸ್ಪೂನ್ ಬಿಲ್, ಓಪನ್ ಬಿಲ್, ಕಿಂಗ್ ಫಿಶರ್, ನೈಟ್ ಹೆರಾನ್, ಪಾಂಡ್ ಹೆರಾನ್, ರೈನ್ ಟ್ರೀ, ನೇರಳೆ, ಹೊಂಗೆ ಮುಂತಾದ ಹೆಸರುಗಳಿಂದ 'ಐಲ್ಯಾಂಡ್'ಗಳನ್ನು ಗುರುತಿಸಲಾಗುತ್ತಿದೆ. ಈ ದ್ವೀಪಗಳು ನೆಲದ ಮೇಲೆ ವಾಸಿಸುವ ಪರಭಕ್ಷಕಗಳಿಂದ (ಉದಾಹರಣೆಗೆ, ನರಿ, ಬೆಕ್ಕು) ಪಕ್ಷಿಗಳನ್ನು ರಕ್ಷಿಸುತ್ತವೆ. ವಲಸೆ ಹಕ್ಕಿಗಳು ಮೊಟ್ಟೆ ಮತ್ತು ಮರಿಗಳನ್ನು ಸುರಕ್ಷಿತವಾಗಿ ಬೆಳೆಸಲು ಅನುಕೂಲಕರ ವಾತಾವರಣ ಒದಗಿಸುತ್ತವೆ. ಪಕ್ಷಿಗಳ ಸಂಖ್ಯೆ ವೃದ್ಧಿಗೆ ಸಹಾಯ ಮಾಡುವ ಮೂಲಕ ಪರಿಸರದ ಸಮತೋಲನ ಕಾಯ್ದುಕೊಳ್ಳುತ್ತವೆ.

ಕಾವೇರಿ ನದಿ ಪಾತ್ರದಲ್ಲಿ ಭಾರಿ ಮಳೆಯಾದಾಗ ಮತ್ತು ಕೆಆರ್‌ಎಸ್ ಜಲಾಶಯದಿಂದ ಅಪಾರ ಪ್ರಮಾಣದ ನೀರನ್ನು ಹೊರಬಿಟ್ಟಾಗ ರಂಗನತಿಟ್ಟು ಪಕ್ಷಿಧಾಮವು ಜಲಾವೃತವಾಗುತ್ತದೆ. ಅಷ್ಟೇ ಅಲ್ಲ, ಪ್ರವಾಹದ ರಭಸಕ್ಕೆ ದ್ವೀಪಗಳು ನಲುಗುತ್ತವೆ. ಮಣ್ಣು ಕೊಚ್ಚಿ ಹೋಗಿ ಕೊರಕಲು ಉಂಟಾಗುತ್ತದೆ. 'ದ್ವೀಪಗಳು ಉಳಿದರೆ ಮಾತ್ರ ಪಕ್ಷಿಗಳ ನಲಿವು ಸಾಧ್ಯ' ಎಂಬುದನ್ನು ಅರ್ಥ ಮಾಡಿಕೊಂಡ ಮೈಸೂರು ವನ್ಯಜೀವಿ ವಿಭಾಗದ ಡಿಸಿಎಫ್ ಐ.ಬಿ. ಪ್ರಭುಗೌಡ ಅವರು ವಿಶೇಷ ಕ್ರಮಗಳನ್ನು ಕೈಗೊಂಡಿದ್ದಾರೆ.

ಈ ಹಿಂದೆ ಜಲ ಪ್ರವಾಹದಿಂದ ದ್ವೀಪಗಳನ್ನು ಪಾರು ಮಾಡಲು ಮರಳಿನ ಚೀಲಗಳನ್ನು ದ್ವೀಪಗಳ ಸುತ್ತ ಜೋಡಿಸುವುದು ಮತ್ತು ಸಸಿಗಳನ್ನು ಬೆಳೆಸುವ ಕ್ರಮ ಕೈಗೊಳ್ಳಲಾಗಿತ್ತು. ಉಕ್ಕಿ ಬರುವ 'ಕಾವೇರಿ' ಆರ್ಭಟಕ್ಕೆ ಮರಳಿನ ಚೀಲ, ಸಸಿಗಳು ನೀರು ಪಾಲಾಗುತ್ತಿದ್ದವು. ಹೀಗಾಗಿ ಇದೇ ಮೊದಲ ಬಾರಿಗೆ ಪ್ರಾಯೋಗಿಕವಾಗಿ ಮೂರು

## 'ಪಕ್ಷಿ ಮಿತ್ರ'ರಾದ 1200 ವಿದ್ಯಾರ್ಥಿಗಳು

ಪರಿಸರ ಶಿಕ್ಷಣ ಮತ್ತು ಪಕ್ಷಿಗಳ ಸಂರಕ್ಷಣೆ ಬಗ್ಗೆ ಶಾಲಾ ವಿದ್ಯಾರ್ಥಿಗಳಿಗೆ ಅರಿವು ಮೂಡಿಸುವ ಉದ್ದೇಶದಿಂದ ರಂಗನತಿಟ್ಟು ಪಕ್ಷಿಧಾಮದಲ್ಲಿ 'ಪಕ್ಷಿ ಮಿತ್ರ' ಎಂಬ ವಿನೂತನ ಕಾರ್ಯಕ್ರಮವನ್ನು ಅರಣ್ಯ ಇಲಾಖೆ ಹಮ್ಮಿಕೊಂಡಿದೆ. ಮೈಸೂರು ಮತ್ತು ಮಂಡ್ಯ ಜಿಲ್ಲೆಯ ವಿವಿಧ ಸರ್ಕಾರಿ ಶಾಲೆಗಳ 8ರಿಂದ 10ನೇ ತರಗತಿಯ ಮಕ್ಕಳು ರಂಗನತಿಟ್ಟಿಗೆ ಆಗಮಿಸಿ ಈ ಕಾರ್ಯಕ್ರಮದ ಪ್ರಯೋಜನ ಪಡೆಯುತ್ತಿದ್ದಾರೆ. ಈಗಾಗಲೇ 1200 ವಿದ್ಯಾರ್ಥಿಗಳನ್ನು 'ಪಕ್ಷಿ ಮಿತ್ರ' ಎಂದು ಘೋಷಿಸಲಾಗಿದೆ.

'ಆಯ್ದ ಸರ್ಕಾರಿ ಶಾಲೆಯಿಂದ 50 ವಿದ್ಯಾರ್ಥಿಗಳನ್ನು ಅರಣ್ಯ ಇಲಾಖೆಯ ವಾಹನದಲ್ಲಿ ರಂಗನತಿಟ್ಟಿಗೆ ಬೆಳಿಗ್ಗೆ 8ಕ್ಕೆ ಕರೆತಂದು ಅವರಿಗೆ ತಿಂಡಿ ಕೊಡುತ್ತೇವೆ. ಪರಿಸರ ಮತ್ತು ಪಕ್ಷಿಗಳ ಕುರಿತು ಕಿರುಪರೀಕ್ಷೆ ನೀಡುತ್ತೇವೆ. ನಂತರ ರಂಗನತಿಟ್ಟು ಪಕ್ಷಿಧಾಮ ಕುರಿತು 'ಪವರ್ ಪಾಯಿಂಟ್ ಪ್ರೆಸೆಂಟೇಶನ್', ದೋಣಿ ವಿಹಾರ, ಪಕ್ಷಿ ವೀಕ್ಷಣೆ ಮುಂತಾದ ಚಟುವಟಿಕೆಗಳು ಇರುತ್ತವೆ. ಸಂಜೆ ವಾಪಸ್ ಹೋಗುವ ವೇಳೆಯಲ್ಲಿ ಮತ್ತೊಂದು ಕಿರುಪರೀಕ್ಷೆ ನೀಡುತ್ತೇವೆ. ಇಲ್ಲಿಗೆ ಬಂದು ಏನನ್ನು ಕಲಿತರು ಎಂಬುದರ ಮೌಲ್ಯಮಾಪನ ಮಾಡುತ್ತೇವೆ. ಈ ಕಾರ್ಯಕ್ರಮ ಸಂಪೂರ್ಣ ಉಚಿತವಾಗಿರುತ್ತದೆ' ಎಂದು ರಂಗನತಿಟ್ಟು ಪಕ್ಷಿಧಾಮದ ಪರಿಸರ ಶಿಕ್ಷಣ ಅಧಿಕಾರಿ ಎಸ್. ಗಗನಾ ಮಾಹಿತಿ ನೀಡಿದರು.



ಕೊಳದ ಬಕ





ಹೆಜ್ಜಾರ್ಲೆಗಳ ವಿಹಾರ